ಔಷಧಿ ಸಸ್ಯಗಳ ಹಾಗೂ ಅವುಗಳನ್ನು ಉಪಯೋಗಿಸುವ ಬಗ್ಗೆ ಕಲಿಯುತ್ತಿದ್ದೇನೆ. ಇಂದೂ ಸಹ ಶಾಲೆ ಮುಗಿಸಿ ಅಲ್ಲಿಗೇ ಹೋಗುತ್ತಿದ್ದೆ. ನೀವು ಬುದ್ಧನನ್ನು ಕರೆದದ್ದು ಕೇಳಿ ಹಿಂದಿರುಗಿ ಬಂದೆ" ಎಂದರು. ಸುಮಾರು 45 ವರ್ಷದ, ಅಪ್ಪಟ ಬಿಳಿಬಣ್ಣದ ಮೈಕಾಂತಿಯ ಅವರಿಗೂ ನೀಲಿ ಕಣ್ಣುಗಳು, ಆಕರ್ಷಕ ನಗು. ಎದೆ ಮತ್ತು ಸೊಂಟದ ಸುತ್ತ ಕೆಂಪು ಬಟ್ಟೆಯನ್ನು ಸುತ್ತಿಕೊಂಡಿದ್ದರು ದಲೈ ಲಾಮಾರಂತೆ. ಅಲ್ಲಿನ ಬೆಟ್ಟಗುಡ್ಡಗಳನ್ನು ಹತ್ತಿ ಸುತ್ತಿ ಬದುಕುತ್ತಿರುವ ಜೀವ ಎನ್ನುವುದು ಅವರ ಮುಖದಲ್ಲಿನ ಒರಟು ಚರ್ಮ ಮತ್ತು ಕಾಲುಗಳ ಸ್ನಾಯುಗಳಿಂದಲೆ ತಿಳಿಯುತ್ತಿತ್ತು. ನಮಗಾಗಿ ಹಿಂದಿರುಗಿದ್ದಕ್ಕೆ ಧನ್ಯವಾದ ತಿಳಿಸಿದೆವು. ಅವರು ನಾವು ಅಲ್ಲಿಗೆ ಬಂದ ಉದ್ದೇಶ ಕೇಳಿದಾಗ ಹೇಳಿದೆ:

"ಇಲ್ಲಿನ ಆರ್ಯರನ್ನು ನೋಡಲು ಬಂದೆವು." ಅದನ್ನು ಕೇಳಿ ಅವರ ಮುಖದಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ. ಬದಲಿಗೆ,

"ನೋಡಿಯಾಯಿತೆ?" ಎಂದರು. ಅವರ ಮಾತಿನಲ್ಲಿ ಯಾವುದೆ ಕುಹಕ ಕಾಣಲಿಲ್ಲ.

"ಇಲ್ಲ" ಎಂದೆ.

"ಯಾಕೆ, ನಿಮ್ಮ ಮುಂದೆಯೇ ನಿಂತಿರುವೆನಲ್ಲ?" ಎಂದರು. ನಾನು ಕಣ್ಣರಳಿಸಿದೆ. ಅದನ್ನು ಕಂಡು ಅವರು ಮತ್ತೆ ಕೇಳಿದರು.

"ಯಾಕೆ ಆಶ್ಚರ್ಯ ಪಡುತ್ತಿದ್ದೀರಿ. ನಿಮಗೆ ಆರ್ಯರು ಹೇಗಿರುತ್ತಾರೆ ಎಂದು ತಿಳಿದಿದೆಯೆ?" ಅವರ ಪ್ರಶ್ನೆಯಲ್ಲಿ ಗಂಭೀರತೆ ಇತ್ತು.



ಆರ್ಯ ಕಣಿವೆಯಲ್ಲಿ ನಿರ್ಮಿಸಲಾಗಿರುವ ಬೌದ್ಧ ವಿಹಾರ